(ಅ) ಸೇಡಂ ಪುರಸಭೆಯಲ್ಲಿ ಒಟ್ಟು ಮಂಜೂರಾದ 97 ಹುದ್ದೆಗಳ ಪೈಕಿ 89 ಹುದ್ದೆಗಳು ಭರ್ತಿಯಾಗಿದ್ದು, 8 ಹುದ್ದೆಗಳು ಖಾಲಿ ಇರುತ್ತದೆ. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

(ಆ) ಇಲ್ಲ

2011ರ ಜನಗಣತಿ ಕಾರ್ಯ ಮುಗಿದಿರುತ್ತದೆ. ಆದರೆ ಕೇಂದ್ರ ಸರ್ಕಾರದ ರಿಜಿಸ್ಟಾರ್ ಜನರಲ್ ಹಾಗೂ ಜನಗಣತಿ ಆಯುಕ್ತರು ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಜನಗಣತಿಯ ಅಂಕಿ-ಅಂಶಗಳನ್ನು ಅಧಿಕೃತವಾಗಿ ಪ್ರಕಟಿಸಿರುವುದಿಲ್ಲ ಅಧಿಕೃತವಾಗಿ ಪ್ರಕಟಿಸಿದ ನಂತರ ಮಳಖೇಡ ಗ್ರಾಮ ಪಂಚಾಯತಿಯನ್ನು ಪಟ್ಟಣ ಪಂಚಾಯತಿಯನ್ನಾಗಿ ರಚಿಸುವ ಬಗ್ಗೆ ಕರ್ನಾಟಕ ಪುರಸಭೆ ಕಾಯ್ದೆ 1964ರ ಕಲಂ 3,9 ಮತ್ತು 349 ರನ್ವಯ ವಿಷಯವನ್ನು ನಿಯಮಾನುಸಾರ ಪರಿಶೀಲಿಸಲಾಗುವುದು.

ಕೃಷಿ ಮಾರುಕಟ್ಟೆ ಕಮಿಟಿ ಹಾಗೂ ಮಳಿಗೆಗಳ ಮಾರಾಟ

264 (628) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) :- ಮಾನ್ಯ ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ಬೀದರ್ ಜಿಲ್ಲೆಯಲ್ಲಿನ ಕೃಷಿ ಮಾರುಕಟ್ಟೆ ಕೇಂದ್ರದಲ್ಲಿ ಎಷ್ಟು ಕಮಿಟಿಗಳು ಕಾರ್ಯ ನಿರ್ವಹಿಸುತ್ತಿವೆ;

(ಆ) ಬೀದರ್ ಜಿಲ್ಲೆಯಲ್ಲಿನ ಕೃಷಿ ಮತ್ತು ಮಾರುಕಟ್ಟೆ ಕೇಂದ್ರದಿಂದ ಹಂಚಲಾಗಿರುವ ವ್ಯಾಪರ ಮಳಿಗೆಗಳು ಪಾರದರ್ಶಕವಾಗಿ ಹಂಚಲಾಗಿದೆಯೇ ;

(ಇ) ಕೃಷಿ ಮಾರುಕಟ್ಟೆ ಕೇಂದ್ರಕ್ಕೆ ಮಳಿಗೆಗಳಿಗಾಗಿ ಬೇಡಿಕೆ ಬಂದಿರುವ ಅರ್ಜಿಗಳಲ್ಲಿ ಬಾಕಿ ಇರುವ ಅರ್ಜಿ ಎಷ್ಟು ?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು):-

(ಅ) ಬೀದರ್ ಜಿಲ್ಲೆಯಲ್ಲಿ 05 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಚುನಾಯಿತ ಆಡಳಿತ ಮಂಡಳಿಗಳು ಕಾರ್ಯ ನಿರ್ವಹಿಸುತ್ತಿವೆ. ಅವುಗಳೆಂದರೆ, ಬೀದರ್, ಹುಮ್ನಾಬಾದ್, ಭಾಲ್ಕಿ, ಔರಾದ್, ಬಸವಕಲ್ಯಾಣ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಾಗಿವೆ.

(ಆ) ಹೌದು

(ಇ) ಅಧಿಸೂಚಿತ ಕೃಷಿ ಉತ್ಪನ್ನಗಳಲ್ಲಿ ವ್ಯವಹರಿಸಲು ಲೈಸೆನ್ಸ್ ಪಡೆದ ಕಾರ್ಯಕರ್ತರಿಗೆ ಆಸ್ತಿ ಹಂಚಿಕೆ ನಿಯಾಮಾವಳಿ 2004ರ ನಿಯಮ 13ರ ಮೇರೆಗೆ

ಜೇಷ್ಠತೆ ಮೇರೆಗೆ ಲೀವ್ ಅಂಡ್–ಲೈಸೆನ್ಸ್ ಆಧಾರದ ಮೇರೆಗೆ ಮಳಿಗೆಗಳನ್ನು ಹಾಗೂ ಲೈಸೆನ್ಸ್‌ದಾರರಲ್ಲದವರಿಗೆ ನಿಯಮ 14ರ ಮೇರೆಗೆ ಮಳಿಗೆಗಳನ್ನು ಟೆಂಡರ್ ಕಂ ಬಹಿರಂಗ ಹರಾಜು ಮೂಲಕ ಹಂಚಿಕೆ ಮಾಡಲು ಅವಕಾಶಿಸಿದ್ದು, ಅದರಂತೆ ಕ್ರಮ ವಹಿಸಲಾಗಿದೆ.

2011–12ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಹುಮ್ನಾಬಾದ್ ಸಮಿತಿಯಲ್ಲಿ ಮಾತ್ರ 13 ಚಿಕ್ಕ ಮಳಿಗೆಗಳ ಹಂಚಿಕೆಗೆ ಕ್ರಮ ವಹಿಸಿದ್ದು ಒಟ್ಟು 43 ಅರ್ಜಿಗಳು ಸ್ವೀಕೃತವಾಗಿದ್ದು, 13 ಅರ್ಜಿದಾರರಿಗೆ ನಿಯಾಮಾನುಸಾರ ಹಂಚಿಕೆ ಮಾಡಿದ್ದು ಉಳಿದ 30 ಅರ್ಜಿದಾರರಿಗೆ ಮಳಿಗೆಗಳನ್ನು ಹಂಚಿಕೆ ಮಾಡಲು ಸಾಧ್ಯವಾಗಿರುವುದಿಲ್ಲ.

ಯಂತ್ರೋಪಕರಣಗಳನ್ನು ಖರೀದಿ

266 (630) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) :– ಮಾನ್ಯ ಕೃಷಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರೈತರಿಗೆ ವಿನಾಯಿತಿ ದರದಲ್ಲಿ ಕೃಷಿ ಯಂತ್ರೋಪಕರಣಗಳನ್ನು ಖರೀದಿಸಲು ಇರುವ ಈಗಿನ ಪದ್ಧತಿಗಳು ಯಾವುವು ?

(ಆ) ಭಾಲ್ಕಿ ತಾಲ್ಲೂಕಿಗೆ ಪ್ರಸಕ್ತ ಸಾಲಿನ ಕೃಷಿ ಯಂತ್ರೋಪಕರಣಗಳನ್ನು ಖರೀದಿಸಲು ಎಷ್ಟು ಹಣ ಸಹಾಯ ನೀಡಲಾಗಿದೆ;

(ಇ) ಯಾವ ಕಾರ್ಯಕ್ರಮದಡಿಯಲ್ಲಿ ಯಂತ್ರೋಪಕರಣಗಳನ್ನು ಖರೀದಿಸ – ಬಹುದಾಗಿದೆ.

(ಈ) ಭಾಲ್ಕಿ ತಾಲ್ಲೂಕಿನಲ್ಲಿ ಹನಿ ನೀರಾವರಿಗೆ ಸಂಬಂಧಿಸಿದ ಉಪಕರಣಗಳನ್ನು ಖರೀದಿಸಲು ಎಷ್ಟು ಧನಸಹಾಯ ನೀಡಲಾಗಿದೆ ;

(ಉ) ಭಾಲ್ಕಿ ತಾಲ್ಲೂಕಿನಲ್ಲಿ ಪಿ.ವಿಸಿ. ಪೈಪ್‌ಲೈನ್ ಡೀಜಲ್ ಜನರೇಟರ್ ಸ್ಪಿಂಕ್ಲರ್ಸ್‌ಗಾಗಿ ಎಷ್ಟು ಬೇಡಿಕೆ ಇದೆ ಈ ಬೇಡಿಕೆಯನ್ನು ಈಡೇರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಏನು ?

ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು):–

(ಅ) ರೈತರು ಉಪಕರಣ ಖರೀದಿಸುವಾಗ ಪೂರ್ಣ ಮೊತ್ತ ನೀಡಿದಲ್ಲಿ, ರೈತರ ಖಾತೆಗೆ ನೇರವಾಗಿ ನೀಡಲು /ರೈತರು ಬ್ಯಾಂಕ್‌ನಲ್ಲಿ ಸಾಲ ಮಾಡಿದ್ದಲ್ಲಿ ಸಾಲ ನೀಡಿದ ಬ್ಯಾಂಕ್ ಖಾತೆಗೆ ಜಮಾ ಮಾಡಲು/ರೈತರು ರೈತರ ವಂತಿಕೆಯನ್ನು ಮಾತ್ರ ಪಾವತಿಸಿ ಉಪಕರಣ ಖರೀದಿಸಿದಲ್ಲಿ ಸಹಾಯಧನವನ್ನು ಸಂಬಂಧಪಟ್ಟ ಸಂಸ್ಥೆಗೆ ನೀಡಲಾಗುತ್ತಿದೆ.